ನಂಜನಗೂಡು ತಾಲ್ಲೂಕು 1895—96ನೇ ಇಸವಿ 8—59ನೇ ನಂಬರು, ಹೊಸಕೋಟೆ ಚನ್ನಬಸವನ ಖೂನೀ ಮೊಕದ್ದ ಮ್ಮಾಕ್ಕೆ ಸಂಬಂಧಪಟ್ಟು ನಂಜನಗೂಡು ತಾಲ್ಲೂಕು ಪೊಲೀಸಿನವರಿಂದ ಅಪೇಕ್ಷಿತನಾಗಿ ಹಾಲಿ ತಪ್ಪಿಸಿಕೊಂಡು ಇರುವ ಬಲಗೈ ರಂಗಯ್ಯಂಬುವನ ಜಹರೇ ಪಟ್ಟು,—

ಹೆಸರು	..	ರಂಗ
ತಂದೆ ಹೆಸರು	..	ದೊಡ್ಡ ರಂಗ
ಜಾತಿ	..	ಬಲಗೈ
ವಯಸ್ಸು	..	ಸುಮಾರು 36 ವರುಷ
ಎತ್ತರ	..	ಅಡಿ 5—5½ ಅಥವಾ 6 ಅಂಗುಲ
ಕಸಬು	..	ಆರಂಭ ಮತ್ತು ಜೀತಗಾರ
ಬಣ್ಣ	..	ಕಪ್ಪು

ಗುರ್ತು ಕಂಡು ಹಿಡಿಯುವದಕ್ಕೆ ಜೇಕಾದ ಭಾವಗಳ ತಪಶೀಲು.

ನೀಳು ಮುಖ ಎಡದತೋಳು ಬಳಭಾಗದಲ್ಲಿ 2 ಅಂಗುಲ ಉದ್ದಕ್ಕೆ ½ ಅಂಗುಲ ಅಗಲಕ್ಕೆ ಕಾಮಾಲೆಗೋಸ್ಕರ ಬರೆ ಹಾಕಿದ ಗುರ್ತುಯಿದೆ. ಮೀಸೆ ಬಿಟ್ಟು ಇದಾನೆ ಇವನನ್ನು ಕೊನೇಲಿ ಕಂಡ ವ್ಯಾಳೆ ಇವನು ಹೊಲೆ ಮಗ್ಗದ ಪಂಚೆ ಉಟ್ಟುಕೊಂಡು ಇದ್ದನು. ಮೇಲ್ಕಡೆ ಬಿಳೀದಟ್ಟಿ ಸುತ್ತಿಕೊಂಡು ಇದ್ದ. ಕರೀ ಕಂಬಳಿ ಹೊದ್ದುಕೊಂಡು ಇದ್ದ.

ಈ ಮನುಷ್ಯನು ಇರುವ ಜಾಗಾ ಮುಂತಾದ್ದರ ಯ್ಯರ್ಫರ್‌ಮೇಷ್ಯಾನೆ ವರ್ತಮಾನವನ್ನ ನಂಜನಗೂಡು ತಾಲ್ಲೂಕು ಪೊಲೀಸ್ ಇನ್‌ಸ್ಪೆಕ್ಟರಿಗಾಗಲಿ ಅಥವಾ ಅಮಲ್ದಾರ್ರವರಿಗಾಗಲಿ ಕೊಡಬೇಕಾಗಿ ಕೋರಿಯಿದೆ.

ಸಿ. ಹಾರ್ಡಿ,
ಮೈಸೂರ್ ಡಿಸ್ಟ್ರಿಕ್ಟ್ ಪೊಲೀಸ್ ಸೂಪರ್‌ಟೆಂಡೆಂಟ್ ಸಾಹೆಬರವರು.

ಫ್ರೆಂಚ್‌ರಾಕ್ಸ್ ಸಬ್ ಡಿವಿಜ್ ಆಫಿಸ್.

ತಾರೀಖು 1ನೇ ಜುಲೈ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮಂಡ್ಯ ತಾಲ್ಲೂಕು ಕುದರಗುಂಡಿ ಹೋಬಳಿ ಸ್ವಾಮ್ಯಗವಡಗೆರೇ ಗ್ರಾಮದ ಕೆರೆಗೆ ನೀರು ಬರತಕ್ಕ ನೀರು ಹರಿಯುವ ಹಳ್ಳದಲ್ಲಿ, ಬಂದಾ ಕುಡಿಕೆಯಲ್ಲಿ ಡೊತಕದ (17—4—0) ಅಂದಾಜಾವುಳ್ಳ ಚಿನ್ನದ ಬುಗಡಿ ಅದದು 4 ಡಿಟೋ ನಾಗರ ಪಡಕು 2 ಕೊಂಡ್ಲು 1 ಕಂಟಿರಾಯಿ ಹಣ 7 ಗೂಡೆಹಣ 4 ಸಹ ದೊರಕಿದ್ದಾಗಿ ಹಾಜರಾಗಿರುವದು ಅವಾನತ್ತು ಯಿದೆ. ಈ ನಿಕ್ಷೇಪಕ್ಕಾಗಲಿ ಅಥವಾ ಇದರ ಏಂದು ಭಾಗಕ್ಕಾಗಲಿ ಹಕ್ಕುದಾರರಾಗಿ ಇರತಕ್ಕವರು ಖುದ್ದಾಗಿಯೇ ಆಗಲಿ ಅಥವಾ ವಕೀಲರ ಮುಖಾಂತ್ರವಾಗಿಯೇ ಆಗಲಿ 1896ನೇ ಇಸವಿ ಡಿಸೆಂಬರ್ ತಾರೀಖು 18ನೇ ಮಧ್ಯಾನ್ಹ ದಿವಿ 12 ಘಂಟೆಗೆ ಫ್ರೆಂಚರಾಕ್ಸ್ ಸಬ್ ಡಿವಿಜ್ ಆಫಿಸ್ ರೂಬರೂಬ್ ಹಾಜರಾಗಿ ಅವುಗಳಲ್ಲಿ ತಮಗಿರುವ ಹಕ್ಕನ್ನ ಸ್ಥಿರಪಡಿಸಿ ಕೂಡ ಜೇಕು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ಪ್ರಸಿದ್ಧಪತ್ರಿಕೆ.

ತಾರೀಖು 12ನೇ ಜೂ 1896.

1. ಕಂದಾಯದ ಬಾಕಿದಾರನಾದ ಸಂಜೂರಾಯರ ಕೃಷ್ಣಪ್ಪನವರಿಂದ ಬರಬೇಕಾದ ಜಮ್ಮಿ ಕಂದಾಯದ ಬಾಕಿಗಾಗಿ ಹಿಡುವಳಿ ಹಕ್ಕು ತಪ್ಪಿಸಲ್ಪಟ್ಟು ಇಫ್ ಯಂದು ಪ್ರಕಟಿಸಲ್ಪಟ್ಟಿರುವ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರ್ ಡಿಸ್ಟ್ರಿಕ್ಟ್ ಶ್ರೀರಂಗಪಟ್ಣ ತಾಲ್ಲೂಕು ಶ್ರೀರಂಗಪಟ್ಣ ಗ್ರಾಮದಲ್ಲಿ ಕಜೇರಿ ರೂಬರೂಬ್ 1896ನೇ ಇಸವಿ ಜುಲೈ 22ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ದಿವಿ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1897ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ವೇರಿಗೆ 336—4—0 ರೂಪಾಯಿ ಆಗಿರುತ್ತೆ

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಜೇಕಡಾ 25 ರೂಪಾಯಿಯನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಭಾಖಿತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೆ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದು ಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಖಿತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲ್‌ಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜ್ ನಿಲ್ಲಿಸಲ್ಪಡುತ್ತೆ.

7. ಹರಾಜ್ ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜ್ ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿಮಾಡಿದ ಮೇಲೆ ಡೆಪ್ಯೂಟಿ ಕಮ್ಮಿಷನರವರಿಂದ ಹರಾಜ್ ಮಂಜೂರ್ಮಾಡಲ್ಪಟ್ಟ ಕೂಡ್ಲೆ ಹರಾಜ್‌ದಾರು, ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜ್‌ದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮ್ಮಿಷನರವರಿಂದ ಸೈ ಮೋರ್ ಮಾಡಲ್ಪಟ್ಟ ಬಂದಾ ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂಧ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್‌ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬ್ಳಿ.	ಗ್ರಾಮ.	ಖಾಯಿದಾರನ ಹೆಸರು.	ಸ್ವತ್ತಿನ ತಫ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಾ ಕಿಮ್ಮತ್ತು.	ಜಮೀನು. ನಂಬರಿ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕೀ ತರೀ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ.	ಜಮೀನು. ಆಕಾರ.	ಸರ್ಕಾರಕ್ಕೆ ಬರಬೇಕಾದ ನೋಟೀಸ್ ಫೀ ವಗ್ಗೈರೆ ಸಹಜವಾದ ಬಾಕಿ ಮೊಬಲಗು.	ಷರಾ.
1	2	3	4	5	6	7	8	9	10	11	
					ರೂ. ಆ. ಪೈ.			ಎಕರೆ ಗುಂ.	ರೂ. ಆ. ಪೈ.	ರೂ. ಆ. ಪೈ.	
ಶ್ರೀರಂಗಪಟ್ಟಣ	ಚಂದಗಾಲು	ಚನ್ನೇಹಳ್ಳಿ ಗ್ರಾಮ	ಸಂಗಂಗೂರು ಯರ ಕೃಷ್ಣಪ್ಪನವರು			1 ಪೈ. 2	ಖುಷ್ಕೀ	2 27	2 0 0	33 15 10	ಸ್ವಭಾನು
						3	ತರೀ	2 30	11 0 0	160 0 0	ತಾರಣ
						19	ಡಿಟೋ	4 12	16 0 0	10 4 3	ವ್ಯಯ
						162 ಪೈ.	ಡಿಟೋ	1 23	6 0 0	243 9 10	ವಿರೋಧಿ
						157 ಪೈ.	ಖುಷ್ಕೀ	2 29	2 8 0	321 2 3	ವಿಕೃತಿ
						177	ಡಿಟೋ	1 23	1 8 0	321 2 3	ಖರ
							ತರೀ	5 5	19 8 0	321 2 3	ನಂದನ
						182	ಖುಷ್ಕೀ	5 15	3 8 0	321 2 3	ವಿಜಯ
						210	ಡಿಟೋ	1 20	1 8 0	321 2 3	ಜಯ
							ತರೀ	5 0	18 8 0	321 2 3	ಮನ್ಮಥಾ
						211 ಪೈ.	ಖುಷ್ಕೀ	2 11	2 0 0	93 3 4	ಖಾಂದು
						212	ಡಿಟೋ	15 34	14 0 0	— — —	
						214 ಪೈ.	ಡಿಟೋ	1 35	1 12 0	2467 14 9	96ನೇ ಇಸವಿ ಮಾ
						195 ಪೈ.	ತರೀ	2 9	8 8 0	499 2 1	ರ್ಚಿ ಆಖೈರಿಗೆ ಬಡ್ಡಿ
						185	ಡಿಟೋ	4 30	18 0 0	3 12 0	ನೋಟಸ್ ಫಿ ವಗ್ಗೈರೆ
						189	ಡಿಟೋ	4 31	19 0 0	— — —	
						191	ಡಿಟೋ	4 23	17 0 0	2970 12 10	
						192	ಡಿಟೋ	4 0	16 0 0		ಮಾರ್ಚಿ ಈಚಿಗೆ ಹ
						193	ಡಿಟೋ	3 8	12 0 0		ರಾಜು ತಾರೀಖು ವರಿವಿ
						198	ಡಿಟೋ	5 20	21 0 0		ಗೆ ಬಡ್ಡಿ ಬರಬೇಕು
						199	ಡಿಟೋ	3 13	12 0 0		
						200	ಡಿಟೋ	1 25	6 0 0		
						201	ಡಿಟೋ	9 17	35 0 0		
						206	ಡಿಟೋ	3 24	15 0 0		
						209	ಡಿಟೋ	5 29	23 0 0		
								105 13	302 4 0		
						168	ತರೀ	3 17	13 0 0	13 13 0	ವಿರೋಧಿ
										13 13 0	ವಿಕೃತಿ
										13 13 0	ಖರ
										13 13 0	ನಂದನ
										13 13 0	ವಿಜಯ
										13 13 0	ಜಯ
										13 13 0	ಮನ್ಮಥಾ
										96 11 0	
										3 12 0	ನೋಟಿಸ್ ಫೀ ವಗ್ಗೈರೆ
										16 13 0	96ನೇ ಮಾರ್ಚಿ ಆ ಖೈರಿಗೆ ಬಡ್ಡಿ
										117 4 0	ಮಾರ್ಚಿ ಈಚಿಗೆ ಹರಾ ಜ್ ತಾರೀಖು ವರಿವಿಗೆ ಬಡ್ಡಿ ಬರಬೇಕು
			ಬಿದ್ದಾಪಟ್ಟಣದ ಖಾಲಿಗೆ ಅನುಭವದಾರ್ ಸಂಗಂಗೂರಾಯರ ಕೃಷ್ಣಪ್ಪನವರು								

236

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸ್ವತ್ತಿನ ತಫ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.	ಜಮೀನು. ನಂಬರ ಅಥವಾ ಜಮೀನಿನ ಹೆಸರು.	ಖುಷ್ಕಿ ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಆಕಾರ.	ಸರಕಾರ್ಕೆ ಬರಬೇಕಾದ ನೋಟಿನ ಹೆ ಗ್ಗೈರೆ ಸಂಪತ್ತಾದ ಬಾಕಿ ಹೊಲಗಂ.			
1	2	3	4	5	6	7	8	9	10	11			
					ರೂ.ಆ.ಪೈ.			ಎಕರೆ ಗುಂ.	ರೂ. ಆ. ಪೈ.	ರೂ.	ಆ.	ಪೈ.	
ಶ್ರೀರಂಗಪಟ್ಟಣ		ಚನ್ನಪಟ್ಟಣ ಗ್ರಾಮದ ಬಿದ್ದಾಜನುಲ್ಲಾಖಾ ಖಾತೆಗೆ ಆ|| ಸಂ ಣೂರಾಯರ ಕೃಷ್ಣಪ್ಪನವರು			190	ತರೀ	3 20	13 0 0	117	4	0	ಮೇಲಿನ ಖಾತೇ ತಪಶೀಲಿನಂತೆ ಮೂ ರ್ಚಿ ಈಚಿಗೆ ಬಡ್ಡಿ ಬರಬೇಕು	
	ಚಂಪಗಾಲು	ಹೊಡ್ಡಂಕನಪಳ್ಳಿ	ಪುಟ್ಟಮಲ್ಲಪ್ಪನವರ ಖಾತೆಗೆ ಅನುಭವದಾ ರ ಸಂಣೂರಾಯರ ಕೃಷ್ಣಪ್ಪನವರು			19	ಬಾಗಾಯತು	0 38	2 4 0	14	14	7	ಪ್ರಮಾಥಿ
							ಖುಷ್ಕಿ	1 3	1 4 0	14	14	7	ವಿಕ್ರಮ
							ನೀರು ತೀರ್ವೆ	0 0	4 8 0	6	10	5	ವಿಷು
										6	10	5	ಚಿತ್ರಭಾನು
								2 1	8 0 0	6	10	5	ಸ್ವಭಾನು
										6	10	5	ತಾರಣ
										8	3	6	ವಿರೋಧಿ
										8	3	6	ವಿಕೃತಿ
										8	3	6	ಖರ
										8	3	6	ನಂದನ
										8	3	6	ವಿಜಯ
										8	3	6	ಜಯ
										8	3	6	ಮನ್ಮಥ
										113	15	4	ನೋಟಿಸ್ ಫೀ ವ
										3	8	0	ಗೈರೆ 96ನೇ ಮಾ
										58	10	11	ರ್ಚಿಆಬೈರಿಗೆಬಡ್ಡಿ
										176	2	3	ಮಾರ್ಚಿಈಚಿಗೆ
													ಹರಾಜ್ ತಾರೀಖು
										3381	7	1	ವರಿವಿಗೆ ಬಡ್ಡಿ ಬರ ಬೇಕು.

ಪಿ. ಪಂಚನಾಥರಾವ್,
ಸಬ್ ಡಿವಿಜ಼ನ್ ಆಫಿಸರ್.

ಮೈಸೂರ ಡಿಸ್ಟ್ರಿಕ್ಟು.

ತಾರೀಖು 30ನೇ ಜೂನ್ 1896ನೇ ಇಸವಿ.

ಮೈಸೂರ ಡಿಸ್ಟ್ರಿಕ್ಟಿನಲ್ಲಿ ಅಡಗಿಯಿರತಕ್ಕ ಈ ಕೆಳಗೆ ನಮೂದಾಗುವ ತಾಲ್ಲೂಕುಗಳಲ್ಲಿ 1896ನೇ ಜುಲೈ ಲಾಗಾಯತು 1897ನೇ ಜೂನ್ ಆಖೈರವರಿಗೆ ಕುರಂಗದ ಕಲ್ಲುಗಳನ್ನು ಜಮಾಯಿಸುವ ಹಕ್ಕುದಾರಿಯನ್ನು ತಾಲ್ಲೂಕ್‌ವಾರಾಗಿ ಆಯಾ ತಾಲ್ಲೂಕುಗಳ ಯದುರಿಗೆ ಬರೆದಿರುವ ತಾರೀಖು ಮತ್ತು ಸ್ಥಳಗಳಲ್ಲಿ ಮಧ್ಯಾನ್ಹ 12 ಘಂಟೆ ಲಾಗಾಯತು ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತದೆಂತ ಯಿದರಿಂದ ಸಮಸ್ತ ಜನಗಳಿಗೂ ತಿಳಿಸಿರುತ್ತದೆ.